# ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀಮತಿ ಹೇಮಲತಾ ನಾಯಕ್
(ವಿಧಾನಸಭೆಯಿಂದ ಚುನಾಯಿತರಾದವರು)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 909

ಉತ್ತರಿಸಬೇಕಾದ ದಿನಾಂಕ : 19-08-2025

ಉತ್ತರಿಸಬೇಕಾದ ಸಚಿವರು : ಮಾನ್ಯ ಮುಖ್ಯಮಂತ್ರಿ

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ರೈತರ ಸಾಲಮನ್ನಾ ಜಾರಿಗೆ ತರಲಾಗಿದೆಯೇ; ತಂದಿದ್ದಲ್ಲಿ, ಜಿಲ್ಲಾವಾರು ಮಾಹಿತಿ ಹಾಗೂ ಸಾಲ ಮನ್ನಾ ಮಾಡಲಾದ ರೈತರ ಸಂಖ್ಯೆ ಮತ್ತು ಮೊತ್ತವನ್ನು ಒದಗಿಸುವುದು; | **ಸಹಕಾರ ಸಂಸ್ಥೆಗಳಿಗೆ ಸಂಬಂಧಿಸಿದಂತೆ:**<br>2022-23, 2023-24 ಮತ್ತು 2024-25 ನೇ ಸಾಲಿನಲ್ಲಿ ರೈತರಿಗಾಗಿ ಸಾಲ ಮನ್ನಾ ಯೋಜನೆ ಜಾರಿಗೆ ತಂದಿರುವುದಿಲ್ಲ.<br><br>2017-18 ನೇ ಸಾಲಿನಲ್ಲಿ ಜಾರಿಗೊಳಿಸಿದ್ದ ರೂ.50,000/- ಗಳ ಸಾಲ ಮನ್ನಾ ಯೋಜನೆಯಡಿಯಲ್ಲಿ ಸಹಕಾರ ಸಂಘಗಳು 54,281 ರೈತರಿಗೆ ಸಂಬಂಧಿಸಿದಂತೆ ತಡವಾಗಿ ಸಲ್ಲಿಸಿದ್ದ ಬಿಲ್ಲುಗಳ ಮೊತ್ತ ರೂ.129.66 ಕೋಟಿಗಳನ್ನು 2023-24ನೇ ಸಾಲಿನಲ್ಲಿ ಬಿಡುಗಡೆ ಮಾಡಲಾಗಿದೆ.<br><br>**ವಾಣಿಜ್ಯ ಬ್ಯಾಂಕುಗಳಿಗೆ ಸಂಬಂಧಿಸಿದಂತೆ:**<br><br>ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ ವಾಣಿಜ್ಯ ಬ್ಯಾಂಕುಗಳು ಮತ್ತು ಗ್ರಾಮೀಣ ಬ್ಯಾಂಕುಗಳ ಕೃಷಿ ಸಾಲಗಳಿಗೆ ಸಂಬಂಧಿಸಿದಂತೆ ಸಾಲಮನ್ನಾ ಯೋಜನೆಯನ್ನು ಜಾರಿಗೆ ತಂದಿರುವುದಿಲ್ಲ. |
| ಆ) | ಚುನಾವಣೆ ಮೊದಲು ಘೋಷಿಸಿದ್ದ ರೈತರ ಸಂಪೂರ್ಣ ಸಾಲ ಮನ್ನಾ ವಾಗ್ದಾನವನ್ನು ಈವರೆಗೆ ಜಾರಿಗೆ ತರಲಿಲ್ಲ ಎಂಬ ಆರೋಪಗಳ ಹಿನ್ನಲೆಯಲ್ಲಿ ಸರ್ಕಾರದ ಸ್ಪಷ್ಟನೆ ಏನು; (ವಿವರಗಳನ್ನು ಒದಗಿಸುವುದು) | **ಸಹಕಾರ ಸಂಸ್ಥೆಗಳಿಗೆ ಸಂಬಂಧಿಸಿದಂತೆ:**<br>ಸಹಕಾರ ಸಂಘಗಳಲ್ಲಿ ರೈತರು ಪಡೆದಿರುವ ಬೆಳೆ ಸಾಲವನ್ನು ಮನ್ನಾ ಮಾಡುವ ಪ್ರಸ್ತಾವನೆ ಇರುವುದಿಲ್ಲ.<br><br>ಸಹಕಾರ ಸಂಘಗಳು ರೈತರಿಗೆ ವಿತರಿಸಿದ ಬೆಳೆ ಸಾಲದ ಪೈಕಿ 1,17,158 ರೈತರಿಂದ ಮಾತ್ರ ರೂ.664.20 ಕೋಟಿಗಳು ಸುಸ್ತಿಯಾಗಿದ್ದು, ಶೇಕಡವಾರು ವಸೂಲಾತಿ ಪ್ರಮಾಣ ಶೇ.97.27 ರಷ್ಟಿದ್ದು, ಮರುಪಾವತಿ ಉತ್ತಮವಾಗಿರುತ್ತದೆ. |

| | | |
|---|---|---|
| | | **ವಾಣಿಜ್ಯ ಬ್ಯಾಂಕುಗಳಿಗೆ ಸಂಬಂಧಿಸಿದಂತೆ:**<br><br>ವಾಣಿಜ್ಯ ಬ್ಯಾಂಕುಗಳು ಮತ್ತು ಗ್ರಾಮೀಣ ಬ್ಯಾಂಕುಗಳ ಕೃಷಿ ಸಾಲಗಳಿಗೆ ಸಂಬಂಧಿಸಿದಂತೆ ಸಾಲಮನ್ನಾ ಬಗ್ಗೆ ಪ್ರಸ್ತಾವನೆ ಇರುವುದಿಲ್ಲ. |
| ಇ) | ರಾಜ್ಯದಲ್ಲಿ ಸಹಕಾರ ಬ್ಯಾಂಕ್‌ಗಳ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು (ಪಿ.ಎ.ಸಿ.ಎಸ್) ಮತ್ತು ರಾಷ್ಟ್ರೀಕೃತ ಬ್ಯಾಂಕ್ ಗಳಲ್ಲಿ ರೈತರ ಸಾಲ ಮನ್ನಾ ಕುರಿತು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ; ಈ ಕುರಿತಂತೆ ಯಾವುದಾದರೂ ಆದೇಶ ಅಥವಾ ಮಾರ್ಗಸೂಚಿ ಹೊರಡಿಸಲಾಗಿದೆಯೇ; (ವಿವರಗಳನ್ನು ಒದಗಿಸುವುದು) | **ಸಹಕಾರ ಸಂಸ್ಥೆಗಳಿಗೆ ಸಂಬಂಧಿಸಿದಂತೆ:**<br>ಸಾಲ ವಸೂಲಾತಿ ಪ್ರಮಾಣ ಉತ್ತಮವಾಗಿದ್ದು, ಸಾಲ ಮನ್ನಾ ಆದೇಶ ಹೊರಡಿಸಿರುವುದಿಲ್ಲ.<br><br>**ವಾಣಿಜ್ಯ ಬ್ಯಾಂಕುಗಳಿಗೆ ಸಂಬಂಧಿಸಿದಂತೆ:**<br>ವಾಣಿಜ್ಯ ಬ್ಯಾಂಕುಗಳು ಮತ್ತು ಗ್ರಾಮೀಣ ಬ್ಯಾಂಕುಗಳ ಕೃಷಿ ಸಾಲಗಳಿಗೆ ಸಂಬಂಧಿಸಿದಂತೆ ಸಾಲಮನ್ನಾ ಕುರಿತಂತೆ ಆದೇಶ ಅಥವಾ ಮಾರ್ಗಸೂಚಿಗಳನ್ನು ಹೊರಡಿಸಲಾಗಿಲ್ಲ. |
| ಈ) | ಸಾಲ ಮನ್ನಾ ಜಾರಿಗೆ ವಿಫಲವಾಗಿರುವುದರಿಂದ ಸಾವಿರಾರು ರೈತರು ಸಂಕಷ್ಟದಲ್ಲಿದ್ದು, ಸರ್ಕಾರ ರೈತರ ಆತ್ಮಹತ್ಯೆ ಪ್ರಕರಣಗಳಲ್ಲಿ ಸಾಲ ಭಾರವೇ ಕಾರಣ ಎಂಬುದರ ಬಗ್ಗೆ ಸರ್ಕಾರದ ನಿಲುವೇನು? (ವಿವರಗಳನ್ನು ಒದಗಿಸುವುದು) | ಸಹಕಾರ ಸಂಘಗಳು ರೈತರಿಗೆ ವಿತರಿಸಿದ ಬೆಳೆ ಸಾಲದ ಪೈಕಿ 1,17,158 ರೈತರಿಂದ ಮಾತ್ರ ರೂ.664.20 ಕೋಟಿಗಳು ಸುಸ್ತಿಯಾಗಿದ್ದು, ಶೇಕಡವಾರು ವಸೂಲಾತಿ ಪ್ರಮಾಣ ಶೇ.97.27 ರಷ್ಟಿದ್ದು ಮರುಪಾವತಿ ಉತ್ತಮವಾಗಿರುತ್ತದೆ. |

**ಕಡತ ಸಂಖ್ಯೆ: ಸಿಒ 232 ಸಿಎಲ್‌ಎಸ್ 2025**

(ಸಿದ್ದರಾಮಯ್ಯ)
ಮುಖ್ಯಮಂತ್ರಿ